# ಪೆದ್ದಿ



ಧರ್ಮಾಧಿಕಾರಿಯ ಮಗ ತನ್ನ ರಜಾದಿನಗಳನ್ನು ಕಳೆಯುವ ಸಲುವಾಗಿ ತನ್ನ ಅಪ್ಪ ಅಮ್ಮಂದಿರೊಂದಿಗೆ ಹಳ್ಳಿಗೆ ಬಂದಿದ್ದ. ಒಂದು ಧಗೆಯ ರಾತ್ರಿಯಲ್ಲಿ ಅವನು ಇದ್ದಕ್ಕಿದ್ದಂತೆ ಅರೆ ಎಚ್ಚರಗೊಂಡು ಭಯಕ್ಕೊಳಗಾಗುತ್ತಾನೆ. ಆದರೆ, ಮೇಲೇಳದೇ ಮಲಗಿದ್ದಲ್ಲೇ ಮಲಗಿರುವಾಗ... ಮಧ್ಯಾಹ್ನ, ಊಟಕ್ಕೆ ಮುಂಚೆ, ಅದೇ ತಾನೆ ತಂತಮ್ಮ ಕೆಲಸಗಳಿಂದ ಹಿಂದಿರುಗಿದ್ದ ಹೆಂಗಳೆಯರು ತಮ್ಮ ಒಳ ಪೆಟ್ಟಿಕೋಟುಗಳನ್ನು ಬಿಚ್ಚಿ ತಮ್ಮ ತಲೆಗಳ ಮೇಲಿಂದ ತೂರಿದವರೇ ಗಲಗಲ ಸದ್ದು ಮಾಡುತ್ತಾ, ಕೇಕೆ ಹಾಕಿ ನಗುತ್ತಾ ಮುಖಗಳನ್ನು ಮೇಲ್ಮುಖವಾಗಿ ಓರೆ ಮಾಡಿಕೊಂಡು ಬೆನ್ನುಗಳನ್ನು ಬಾಗಿಸಿಕೊಂಡು ಬೆವರಿನಿಂದ ಒದ್ದೆಯಾಗಿದ್ದ ತಮ್ಮ ಬೆಳ್ಳಂಥ ಬೆಳ್ಳನೆಯ ಮೈಗಳೊಂದಿಗೆ ಬೆಚ್ಚನೆಯ ಮಿರಮಿರ ಮಿನಗುವ ನೀರಿನೊಳಕ್ಕೆ ಚಂಗನೆ ನೆಗೆಯುವುದನ್ನು ನದಿಯ ತಡಿಯಲ್ಲಿ ಅದರ ಚಾಚಿನಲ್ಲಿದ್ದ ನೀರುಹಬ್ಬೆ ಗಿಡದ ಪೊದೆಯ ಮರೆಯಲ್ಲಿ ನಿಂತು ಹೊಂಚು ಹಾಕಿ ಕದ್ದು ನೋಡುತ್ತಿರುವಂತೆ ಮತ್ತಷ್ಟು ವಿಚಿತ್ರ ಕಲ್ಪಿತ ಭಾವನೆಗೊಳಗಾಗುತ್ತಾನೆ. ಇದರಿಂದ ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾಗದೆ ಮೇಲೆದ್ದವನೇ ಕತ್ತಲೆಯಲ್ಲೇ ಪಡಸಾಲೆಯ ಮುಖೇನ ಅಡಿಗೆಮನೆಗೆ ಹೋಗುತ್ತಾನೆ. ಕತ್ತಲಿಂದ ಮುಕ್ಕರಿಯುತ್ತಿದ್ದ ಅಡಿಗೆಮನೆ ಮುಚ್ಚೊಲೆಯಿಂದಾಗಿ ಬೆಚ್ಚಗಿತ್ತು. ಕತ್ತಲೆಯಲ್ಲಿ ತಡವರಿಸುತ್ತಾ ಹಲಗೆ ಹಾಸಿಗೆಯಲ್ಲಿ ಮಲಗಿದ್ದ, ಬಂಧು ಬಳಗ ಏನೊಂದೂ ಅಲ್ಲದ ಎಲ್ಲರ ಬಾಯಲ್ಲೂ ಪೆದ್ದಿ ಎಂದೇ ಖ್ಯಾತಿ ಪಡೆದಿದ್ದ ಅಡಿಗೆಯವಳತ್ತ ಕೈಗಳನ್ನು ಮುಂಚಾಚಿಕೊಂಡು ನಡೆಯುತ್ತಾನೆ. ಆ ಚಣ ಆದ ಭಯಕ್ಕೆ ಅವಳಿಗೆ ಗಟ್ಟಿಯಾಗಿ ಕೂಗಲೂ ಆಗುವುದಿಲ್ಲ. ಅನಂತರ ಧರ್ಮಾಧಿಕಾರಿಯ ಮಗ ಅವಳೊಂದಿಗೆ ಇಡೀ ಬೇಸಿಗೆ ಮಲಗುತ್ತಾನೆ. ಅಂತೆಯೇ ಮಗನೊಬ್ಬನ ಹುಟ್ಟಿಗೆ ಕಾರಣವಾಗುತ್ತಾನೆ. ಆ ಹುಡುಗ ಕ್ರಮೇಣ ತನ್ನ ಅವ್ವನೊಂದಿಗೆ ಅಡಿಗೆಮನೆಯಲ್ಲಿಯೇ ಬೆಳೆಯತೊಡಗುತ್ತದೆ. ಅದು ಧರ್ಮಾಧಿಕಾರಿಗೆ, ಮತ್ತವನ ಹೆಂಡತಿ, ಖುದ್ದು ಪಾದ್ರಿಗೆ, ಮತ್ತವನ ಇಡೀ ಮನೆಗೆ, ಅಂಗಡಿಯವನ ಮನೆಯವರಿಗೆ ಹಾಗೂ ಆ ಹಳ್ಳಿಯ ಪೊಲೀಸಿನವನಿಗೆ, ಅವನ ಹೆಂಡತಿಗೆ – ಹೀಗೆ ಇಡೀ ಹಳ್ಳಿ ಹಳ್ಳಿಗೇ ಗೊತ್ತಿರುತ್ತೆ, ಆ ಹುಡುಗ ಯಾರೆಂದು. ಆದರೆ, ಮುಂದೆಯೂ ರಜಾ ದಿನಗಳನ್ನು ಕಳೆಯಲು ಬರುತ್ತಿದ್ದ ಧರ್ಮಾಧಿಕಾರಿಯ ಮಗ ಮಾತ್ರ ತನ್ನ ಘನ ಕಾರ್ಯಕ್ಕೆ ಸಿಡಿಮಿಡಿಗೊಂಡು ಅವಮಾನಗೊಂಡವನಂತೆ ಆ ಹುಡುಗನತ್ತ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ.

ಧರ್ಮಾಧಿಕಾರಿಯ ಮಗ, ಧರ್ಮಾಧಿಕಾರಿಯೇ ಎಲ್ಲರಿಗೂ ಹೇಳಿದಂತೆ, ‘ಮೇಧಾವಿಯಾಗಿ’ ಪದವೀಧರನಾದಾಗ, ಅಕಾಡೆಮಿಗೆ ಸೇರುವ ಮುನ್ನ ಮತ್ತೊಂದು ಬೇಸಿಗೆಯ ರಜೆಯನ್ನು